ಕರ್ನಾಟಕ ವಿಧಾನ ಸಭೆ, ಸಂಶೋಧನಾ ಹಾಗೂ ಉಲ್ಲೇಖನಾ ಶಾಖೆ

**KARNATAKA LEGISLATIVE ASSEMBLY, RESEARCH AND REFERENCE BRANCH**

ಪತ್ರಿಕಾ ತುಣುಕುಗಳು

**PAPER CLIPPINGS**

12

ಇಲಾಖೆ / ವಿಷಯ : DEPARTMENT / SUBJECT: ಕೊರೊನಾ-13

ಪತ್ರಿಕೆಯ ಹೆಸರು : NAME OF THE NEWS PAPER: ವಿಜಯವಾಣಿ    ದಿನಾಂಕ : DATE: 12/4/21

ಸಚಿವ ಡಾ.ಸುಧಾಕರ್ ಎಚ್ಚರಿಕೆ | ವಿಜಯವಾಣಿ, ದಿಗ್ವಿಜಯ ಫೋನ್-ಇನ್

# ನಿರ್ಲಕ್ಷಿಸಿದ್ರೆ ಲಾಕ್‌ಡೌನ್

ವಿಜಯವಾಣಿ ಸುದ್ದಿಜಾಲ ಬೆಂಗಳೂರು (12-4-21)

ಕೋವಿಡ್ ತಡೆಗಟ್ಟಲು ಇನ್ನೂ 2 ತಿಂಗಳು ಕಟ್ಟು ನಿಟ್ಟಿನ ಕ್ರಮ ಅಗತ್ಯವಾಗಿದ್ದು, ಜನರು ಸರ್ಕಾರದ ಜತೆಗೆ ಸಹಕಾರ ನೀಡದೆ ಹೋದರೆ, ಲಾಕ್‌ಡೌನ್ ಅನಿವಾರ್ಯವಾಗಲಿದೆ ಎಂದು ಆರೋಗ್ಯ ಮತ್ತು ವೈದ್ಯಕೀಯ ಶಿಕ್ಷಣ ಸಚಿವ ಡಾ.ಸುಧಾಕರ್ ಎಚ್ಚರಿಕೆ ನೀಡಿದ್ದಾರೆ.

ವಿಜಯವಾಣಿ, ದಿಗ್ವಿಜಯ ನ್ಯೂಸ್ ಫೋನ್-ಇನ್ ಕಾರ್ಯಕ್ರಮದಲ್ಲಿ ಮಾತನಾಡಿ, ಕಳೆದ ವರ್ಷ ಲಾಕ್‌ಡೌನ್ ಅನಿವಾರ್ಯವಾಗಿತ್ತು. ಈ ಬಾರಿ ಅಂತಹ ಸ್ಥಿತಿ ಬಾರದಿರಲಿ ಎನ್ನುವ ನಿಟ್ಟಿನಲ್ಲಿ ಸರ್ಕಾರ ಪ್ರಯತ್ನ ಮಾಡುತ್ತಿದೆ. ಜನರು ನಿರ್ಲಕ್ಷಿಸಿದರೆ ಪರಿಸ್ಥಿತಿ ನಿಭಾಯಿಸುವುದು ಕಷ್ಟವಾಗಲಿದೆ ಎಂದರು.

ಕಳೆದ ವರ್ಷ ಬೆಂಗಳೂರಿನಲ್ಲಿ ಪೀಕ್ ಟೈಂನಲ್ಲಿ 4500 ಪ್ರಕರಣಗಳಿದ್ದವು. ಆದರೆ, ಈ ದಿನ 7500 ಜನರಿಗೆ ಸೋಂಕು ದೃಢಪಟ್ಟಿರುವುದು ಆತಂಕಕಾರಿ. ಇದೇ ರೀತಿ ತೀವ್ರಗತಿಯಲ್ಲಿ ಸೋಂಕು ಹರಡಿದರೆ ನಿಯಂತ್ರಣ ಕೂಡ ಕಷ್ಟವಾಗಬಹುದು ಎಂದರು.

**ಚಿಕಿತ್ಸಾ ಸೌಲಭ್ಯ ವ್ಯವಸ್ಥೆ:** ರಾಜ್ಯದ ಆಸ್ಪತ್ರೆಗಳಲ್ಲಿ 89500 ಹಾಸಿಗೆ ಸೌಲಭ್ಯವಿದೆ. ಕಳೆದ ವರ್ಷ 6 ಸಾವಿರ ಆಕ್ಸಿಜನ್ ಸಹಿತ ಹಾಸಿಗೆ ಸೌಲಭ್ಯವಿದ್ದರೆ, ಈಗ ಈ ಸಂಖ್ಯೆ 35 ಸಾವಿರಕ್ಕೆ ವಿಸ್ತಾರವಾಗಿದೆ. ಕಳೆದ ಬಾರಿ 500 ಐಸಿಯು ಇದ್ದರೆ, ಈ ವರ್ಷ 3144 ಐಸಿಯು ವ್ಯವಸ್ಥೆ ಇದೆ. 3 ಸಾವಿರ ಆಕ್ಸಿಜನ್ ಸಹಿತ ವೆಂಟಿಲೇಟರ್ ಸೌಲಭ್ಯವಿದೆ. ಕಳೆದ ವರ್ಷ ಸಾವಿನ ಪ್ರಮಾಣ ಶೇ.1.42 ಇತ್ತು. ಈಗ ಇದು ಶೇ.0.5ಗೆ ಇಳಿದಿದೆ. ಖಾಸಗಿ ಆಸ್ಪತ್ರೆಗಳು ಸಹಕಾರ ನೀಡುತ್ತಿರುವುದರಿಂದ ವೈದ್ಯಕೀಯ ಪರಿಸ್ಥಿತಿ ನಿರ್ವಹಣೆ ಉತ್ತಮವಾಗಿದೆ ಎಂದರು.

**ಗ್ರಾಪಂಗೆ ಟಾಸ್ಕ್ ಫೋರ್ಸ್:** ಗ್ರಾಮ ಪಂಚಾಯಿತಿ ಮಟ್ಟದಲ್ಲಿಯೂ ಟಾಸ್ಕ್ ಫೋರ್ಸ್ ಸಮಿತಿ ರಚನೆ ಮಾಡಲಾಗುವುದು. ಅಲ್ಲಿನ ಗ್ರಾಪಂ ಅಧ್ಯಕ್ಷರು, ಸದಸ್ಯರು, ಹಿರಿಯ ನಾಗರಿಕರು, ಮುಖಂಡರು ಸೇರಿ ಈ ಸಮಿತಿ ರಚನೆ ಮಾಡಲು ಉದ್ದೇಶಿಸಲಾಗಿದೆ ಎಂದರು.

**ಹಳ್ಳಿಗಳಿಗೆ ವಾಹನ ವ್ಯವಸ್ಥೆ:** ಮನೆ ಮನೆಗೆ ಹೋಗಿ ವ್ಯಾಕ್ಸಿನ್ ಕೊಡುವುದು ಕಷ್ಟ. ಆದರೆ, ಆಸ್ಪತ್ರೆಗಳಿಗೆ ಹಳ್ಳಿಗಳ ವೃದ್ಧರನ್ನು ಕರೆತರಲು ವಾಹನ ಸೌಲಭ್ಯ ಕಲ್ಪಿಸಿಕೊಡಲು ಜನಪ್ರತಿನಿಧಿಗಳು, ಸಂಘ-ಸಂಸ್ಥೆಗಳು ಮುಂದೆ ಬರಲಿ ಎಂದು ವಿನಂತಿಸಲಾಗಿದೆ. ಇದೊಂದು ಅಭಿಯಾನ ರೀತಿ ನಡೆಯಬೇಕಿದೆ. ಈ ರೀತಿಯ ಪ್ರಯತ್ನ ಚಿಕ್ಕಬಳ್ಳಾಪುರ ಕ್ಷೇತ್ರದಲ್ಲಿ ಮಾಡಲಾಗಿದೆ ಎಂದರು.

**ಶೇ.90 ಬಿಲ್ ಪಾವತಿ:** ಖಾಸಗಿ ಆಸ್ಪತ್ರೆಗಳಿಗೆ ಶೇ.90 ಬಿಲ್ ಪಾವತಿ ಮಾಡಲಾಗಿದೆ. ಆದರೆ, ಸರಿಯಾದ ಮಾಹಿತಿ ಇಲ್ಲದೆ, ದಾಖಲಾತಿ ಕೊರತೆ ಇರುವ ಪ್ರಕರಣಗಳಲ್ಲಿ ಬಿಲ್ ಪಾವತಿ ತಡವಾಗಿದೆ ಎಂದು ಹೇಳಿದರು.




## ನೈಟ್ ಕರ್ಫ್ಯೂ ಅನಿವಾರ್ಯ

ಮಹಾರಾಷ್ಟ್ರದಲ್ಲಿ ವೀಕೆಂಡ್ ಕರ್ಫ್ಯೂ ಮಾಡಲಾಗಿದೆ. ಕೆಲ ನಗರಗಳಲ್ಲಿ ನೈಟ್ ಕರ್ಫ್ಯೂ ಜಾರಿ ಮಾಡುವ ಮೂಲಕ ಜನರಲ್ಲಿ ಜಾಗೃತಿ ಮೂಡಿಸುವ ಕೆಲಸವನ್ನು ಸರ್ಕಾರ ಮಾಡುತ್ತಿದೆ. ಮಧ್ಯರಾತ್ರಿ ತನಕ ನಡೆಯುತ್ತಿದ್ದ ಪಬ್, ಬಾರ್ ಸಂಸ್ಕೃತಿ ಮೋಜು ಮಸ್ತಿಗೆ ಕಡಿವಾಣ ಹಾಕಲೇಬೇಕಿರುವ ಕಾರಣ ಈ ಕ್ರಮ ಅನಿವಾರ್ಯ. ಈ ಬಗ್ಗೆ ಚಿಂತನೆ ಮಾಡಿಯೇ ತೀರ್ಮಾನಿಸಲಾಗಿದೆ. ಟೀಕೆ ಟಿಪ್ಪಣಿ ಮಾಡುವ ಬದಲು, ಜನಪ್ರತಿನಿಧಿಗಳಾದ ನಮಗೂ ಜವಬ್ದಾರಿ ಇದೆ. ಅದನ್ನು ಅರಿತು ಸಹಕಾರ ನೀಡಲಿ ಎಂದು ಡಾ.ಸುಧಾಕರ್ ಹೇಳಿದರು.

## ತಜ್ಞರ ಸಲಹಾ ಸಮಿತಿ ಎಚ್ಚರಿಕೆ

ಕೋವಿಡ್ ಸೋಂಕು ಕಳೆದ ಬಾರಿ ನಿಧಾನವಾಗಿ ಬಂದು, ತಡವಾಗಿ ಹೆಚ್ಚಾಗಿತ್ತು. ಆದರೆ, ಈ ಬಾರಿ 2ನೇ ಅಲೆ ಬಹಳ ಬೇಗ ಬಂದಿದ್ದು, ಬೇಗನೆ ಕ್ಷೀಣವಾಗುವ ಸಾಧ್ಯತೆ ಇದೆ. ಆದ್ದರಿಂದ ಇನ್ನೆರಡು ತಿಂಗಳು ಸವಾಲಿನ ದಿನಗಳಾಗಿವೆ. ದೇಶ, ವಿದೇಶದ ಸ್ಥಿತಿಯನ್ನು ಅಧ್ಯಯನ ಮಾಡಿ ತಜ್ಞರ ಸಮಿತಿ ಹಲವು ಶಿಫಾರಸುಗಳನ್ನು ಮಾಡಿದೆ. ಸಿಎಂ ಅಧ್ಯಕ್ಷತೆಯಲ್ಲಿ ನಡೆಯುವ ಸಭೆಯಲ್ಲಿ ಈ ಬಗ್ಗೆ ಚರ್ಚಿಸಿ ಅಂತಿಮ ನಿರ್ಣಯ ತೆಗೆದುಕೊಳ್ಳಲಾಗುವುದು ಎಂದು ಡಾ.ಸುಧಾಕರ್ ತಿಳಿಸಿದರು.



ದೇಶದಲ್ಲಿ ಈಗ ಪ್ರತಿ ತಿಂಗಳು 4 ಕೋಟಿ ಲಸಿಕೆ ಉತ್ಪಾದನೆ ಮಾಡಲಾಗುತ್ತಿದೆ. ಒಂದೇ ಬಾರಿಗೆ ಎಲ್ಲರಿಗೂ ಲಸಿಕೆ ಕೊಡಲು ಸಾಧ್ಯವಿಲ್ಲವಾದ ಕಾರಣ ವಯೋಮಿತಿ ನಿರ್ಬಂಧ ಹಾಕಲಾಗಿದೆ. ಕ್ರಮೇಣ ಮಿತಿಯನ್ನು ಸಡಿಲ ಮಾಡಲಾಗುವುದು. ಈ ದೇಶದ ಜನಸಂಖ್ಯೆ 130 ಕೋಟಿ ಇದೆ. 46 ದೇಶಗಳ ಜನಸಂಖ್ಯೆ ಒಟ್ಟು ಮಾಡಿದರೆ 110 ಕೋಟಿ ಆಗುವುದಿಲ್ಲ. ಆದ್ದರಿಂದ ನಮ್ಮ ದೇಶದ ಪರಿಸ್ಥಿತಿಗೆ ಅನುಗುಣವಾಗಿ ಇದನ್ನು ಕೇಂದ್ರ ಸರ್ಕಾರ ನಿಭಾಯಿಸುತ್ತಿದೆ ಎಂದು ಸಚಿವರು ಹೇಳಿದರು.

## 6 ತಿಂಗಳ ಬಳಿಕ 10000 ಗಡಿ ದಾಟಿದ ಕೇಸ್

**ಬೆಂಗಳೂದು:** ರಾಜ್ಯದಲ್ಲಿ ಕಳೆದ 6 ತಿಂಗಳ ನಂತರ ಮೊದಲ ಬಾರಿಗೆ ಭಾನುವಾರ 10 ಸಾವಿರಕ್ಕೂ ಅಧಿಕ ಕರೊನಾ ಹೊಸ ಪ್ರಕರಣ ದಾಖಲಾಗಿವೆ. ಈ ಮೂಲಕ ಕೋವಿಡ್ 2ನೇ ಅಲೆ ಅಬ್ಬರ ಹೆಚ್ಚಾಗಿದ್ದು, ಹಬ್ಬದ ಸಂದರ್ಭದಲ್ಲಿ ಕೋವಿಡ್ ನಿಯಮ ಪಾಲಿಸಿದಲ್ಲಿ ಮಾತ್ರ ಸೋಂಕು ತಗಲುವಿಕೆಯಿಂದ ತಪ್ಪಿಸಿಕೊಳ್ಳಬಹುದಾಗಿದೆ. 24 ಗಂಟೆಗಳಲ್ಲಿ 10,250 ಮಂದಿಗೆ ಸೋಂಕು ತಗುಲಿದ್ದು, ಒಟ್ಟು ಸೋಂಕಿತರ ಸಂಖ್ಯೆ 10.65 ಲಕ್ಷಕ್ಕೆ ಏರಿಕೆಯಾಗಿದೆ. ಮತ್ತೊಂದೆಡೆ 2,638 ಮಂದಿ ಸೋಂಕು ಮುಕ್ತರಾಗಿದ್ದು, ಈವರೆಗೆ 9.83 ಲಕ್ಷ ಮಂದಿ ಗುಣಮುಖರಾಗಿದ್ದಾರೆ. ಇನ್ನು ಸಕ್ರಿಯ ಸೋಂಕಿತರ ಸಂಖ್ಯೆ 69,225ಕ್ಕೆ ಏರಿಕೆಯಾಗಿದೆ. ಈ ಪೈಕಿ ಗಂಭೀರ ಆರೋಗ್ಯ ಸ್ಥಿತಿಯಲ್ಲಿರುವ 440 ಮಂದಿ ತೀವ್ರ ನಿಗಾ ಘಟಕದಲ್ಲಿದ್ದಾರೆ. ಸೋಂಕಿಗೆ 40 ಮಂದಿ ಬಲಿಯಾಗಿದ್ದು, ಈ ಪೈಕಿ 28 ಮಂದಿ ವೃದ್ಧರಾಗಿದ್ದಾರೆ. ರಾಜ್ಯದಲ್ಲಿ ಭಾನುವಾರ 4,933 ಕೇಂದ್ರಗಳಿಂದ 70 ಸಾವಿರ ಮಂದಿಗೆ ಲಸಿಕೆ ನೀಡಲಾಗಿದೆ. ಒಟ್ಟಾರೆ ಈವರೆಗೆ 58.51 ಲಕ್ಷ ಡೋಸ್ ಲಸಿಕೆ ನೀಡಲಾಗಿದೆ ಎಂದು ಆರೋಗ್ಯ ಇಲಾಖೆ ಮಾಹಿತಿ ನೀಡಿದೆ.

- ಒಂದೇ ದಿನ **10,250** ಮಂದಿಗೆ ಸೋಂಕು ದೃಢ

## ಸರ್ಕಾರದ ವಿರುದ್ಧ ಕಾಂಗ್ರೆಸ್ ಟೀಕೆ

**ಬೆಂಗಳೂರು:** ಕರೊನಾ ಎದುರಿಸಲು, ಸೋಂಕಿತರನ್ನು ರಕ್ಷಿಸಲು ಯಾವುದೇ ಗಂಭೀರ ಸಿದ್ಧತೆ ಮಾಡಿಕೊಳ್ಳದ ಈ ಸರ್ಕಾರ ರಾತ್ರಿ ಕರ್ಫ್ಯೂ ಕರೊನಾ ತಡೆಯುತ್ತದೆ ಎಂದು ನಂಬಿಕೊಂಡಿದೆ ಎಂದು ಕಾಂಗ್ರೆಸ್ ಲೇವಡಿ ಮಾಡಿದೆ. ಸೋಂಕಿನ ಮೊದಲ ಅಲೆಯಿಂದ ಕಿಂಚಿತ್ತೂ ಪಾಠ ಕಲಿಯದೆ ರೋಗಿಗಳ ಬೆಡ್ಡಿನಲ್ಲಿ, ಬೆಡ್ಡಿನಲ್ಲಿ ಭ್ರಷ್ಟಾಚಾರ ನಡೆಸಿದ್ದೊಂದೇ ಬಿಜೆಪಿ ಸರ್ಕಾರದ ಸಾಧನೆ ಎಂದು ಕುಟುಕಿ ಟ್ವೀಟ್ ಮಾಡಿದೆ.